ಹಾಗೂ ಟೈಯನ್ನು. ಅವರು ಇನ್ನೂ ವಿವಿಯಲ್ಲಿ ಪ್ರಾಧ್ಯಾಪಕರಾಗಿದ್ದ ಕಾಲ... ಬೆಳಗಿನ ವಾಕಿಂಗ್ ಹೋಗುವಾಗಲೂ ತಮ್ಮ ಪ್ರೊಫೆಸರ್ ಡ್ರೆಸ್‌ಅನ್ನೇ ಧರಿಸುತ್ತಿದ್ದರು... ಕಳೆದ ಆರೇಳು ವರ್ಷಗಳಿಂದ ಈಚೆಗೆ ಮನೆಯಲ್ಲಿ ಮಕ್ಕಳು, ಸೊಸೆಯಂದಿರು ಆಕ್ಷೇಪಿಸಿದ್ದರಿಂದ 'ವಾಕಿಂಗ್' ಡ್ರೆಸ್‌ನಲ್ಲಿ ಬದಲಾವಣೆಯಾಗಿತ್ತು. 75ರ ಹರೆಯದ ಪ್ರೊ. ಶಿವಪ್ಪನವರಿಗೆ ಹಳೆಯ ವಿದ್ಯಾರ್ಥಿನಿಯರು ಎದುರಾದರೆ ಈಗಲೂ, ಪ್ರೊಫೆಸರ್ ಡ್ರೆಸ್‌ನಲ್ಲೇ ಕಾಣಿಸಿಕೊಳ್ಳಲು ಇಷ್ಟಪಡುತ್ತಾರೆ. ಯಾರಾದರೂ ಹಳೆಯ ವಿದ್ಯಾರ್ಥಿನಿ ವಾಕಿಂಗ್‌ನಲ್ಲಿ ಸಿಕ್ಕರೆ, ಅವರನ್ನು ಮಾತನಾಡಿಸುವ ಗೋಜಿಗೆ ಹೋಗುವುದಿಲ್ಲ. ಆದರೆ ಮಾತನಾಡಿಸಬೇಕೆಂಬ ಹಂಬಲ ಬಹಳಷ್ಟಿರುತ್ತದೆ... 'ಪ್ರೊಫೆಸರ್ ಡ್ರೆಸ್' ತಪ್ಪಿಸಿದ ಮಗ ಸೊಸೆಯರ ಮೇಲೆ ಕೆಂಡಾಮಂಡಲವಾಗುತ್ತಾರೆ... ಹಳೆಯ ವಿದ್ಯಾರ್ಥಿನಿಯೊಂದಿಗೆ ಮಾತನಾಡಿಸುವ ಅವಕಾಶ ತಪ್ಪಿಸಿದರಲ್ಲ ಎಂದು ಹಲುಬುತ್ತಾರೆ.

ಇವತ್ತಿನ ಬೆಳಗಿನ ವಾಕಿಂಗ್‌ನಲ್ಲಿ 'ಪ್ರೊಫೆಸರ್ ಡ್ರೆಸ್'ನಲ್ಲಿ ಇದ್ದಿದ್ದರೆ ಇಷ್ಟೊಂದು ಅಪಮಾನವಾಗುತ್ತಿರಲಿಲ್ಲವೆಂಬ ಸಮಜಾಯಿಷಿ ಹೇಳಿಕೊಂಡರು. ತಮ್ಮ ವಾರಿಗೆಯ ಗೆಳೆಯರೊಂದಿಗೆ ಹರಟೆ ಹೊಡೆಯುತ್ತಾ ವಾಕಿಂಗ್‌ಗೆ ಹೋದ ಪ್ರೊ. ಶಿವಪ್ಪನವರು ವಾಡಿಕೆಯಂತೆ ರಾಮಮಂದಿರದ ಆವರಣ ಪ್ರವೇಶಿಸುತ್ತಿದ್ದಂತೆ ಗುಂಪು ಚದುರಿತು. ಆವರಣದ ಬಲಬದಿಯಲ್ಲಿನ ಪ್ರಶಾಂತ ಜಾಗದಲ್ಲಿ 'ಪ್ರಾಣಾಯಾಮಕ್ಕೆ' ಕೂಡಬೇಕೆನ್ನುವಷ್ಟರಲ್ಲಿ ಹಳೆಯ ವಿದ್ಯಾರ್ಥಿ ಕಣ್ಣಿಗೆ ಬಿದ್ದ. ನೋಡಲು ಕಪ್ಪಗಿದ್ದ ಬಸವರಾಜನನ್ನು ಪ್ರೊ. ಶಿವಪ್ಪನವರು 'ಕರಿಬಸಯ್ಯ' ಎಂದೇ ಕರೆಯುತ್ತಿದ್ದರು... ತಮ್ಮ ವಿದ್ಯಾರ್ಥಿಗಳಿಗೆ ಬಣ್ಣ, ಆಕಾರ ಹಾಗೂ ಅಂಗವೈಕಲ್ಯಗಳನ್ನು ಅನುಲಕ್ಷಿಸಿ 'ಹೆಸರಿಡುವುದರಲ್ಲಿ' ಶಿವಪ್ಪನವರು ನಿಸ್ಸೀಮರು... ಅವರು ಒಮ್ಮೆ ನಾಮಕರಣ ಮಾಡಿದರೆಂದರೆ ಆ ಹೆಸರು ವಿದ್ಯಾರ್ಥಿಗಳೊಂದಿಗೆ ಕಾಯಂ ಆಗಿ ಉಳಿದುಬಿಡುತ್ತಿತ್ತು. ಪಾರ್ವತಿ ಎಂಬ ವಿದ್ಯಾರ್ಥಿನಿ ಕುಳ್ಳಗಿದ್ದಳು. ಅವಳಿಗೆ 'ಅಮುಲ್ ಬೇಬಿ' ಎಂಬ ಹೆಸರಿಟ್ಟಿದ್ದರು. ನಂತರದ ದಿನಗಳಲ್ಲಿ ಪಾರ್ವತಿ ಎಂಬ ಹೆಸರನ್ನು ಎಲ್ಲರೂ ಮರೆತುಬಿಟ್ಟರು. 'ಅಮುಲ್ ಬೇಬಿ' ಎಂದೇ ಕರೆಯತೊಡಗಿದರು. ಪಾಪ ಆ ಹುಡುಗಿ ಮದುವೆ ಪತ್ರದಲ್ಲಿ ಪಾರ್ವತಿ ಹೆಸರಿನ ಎದುರು ಬ್ರಾಕೆಟ್‌ನಲ್ಲಿ 'ಅಮುಲ್ ಬೇಬಿ' ಎಂದು ಬರೆದುಕೊಳ್ಳಬೇಕಾಯಿತು. ಕರಿಬಸಯ್ಯನದೂ ಅದೇ ಕತೆ.

ಬಸವರಾಜ ಉರ್ಫ್ ಕರಿಬಸಯ್ಯ ಪ್ರೊ. ಶಿವಪ್ಪನವರ ಕಣ್ಣಿಗೆ ಬೀಳುತ್ತಲೇ ಹಳೆಯ ಸಲುಗೆ ಮತ್ತು ಧಾಟಿಯಲ್ಲಿ 'ಏಯ್ ಕರಿಬಸಯ್ಯ... ಇಲ್ಲಿ ಬಾ' ಎಂದು ಕರೆದರು. ಕರಿಬಸಯ್ಯ ಮೊದಲಿನ ವಿಧೇಯತೆಯೊಂದಿಗೆ ಗುರುಗಳ ಹತ್ತಿರ ಬಂದು, 'ಆರಾಮ ಇದ್ದೀರಾ ಸರ್' ಎಂದ. ಶಿವಪ್ಪನವರ ಕೊಂಕುಬುದ್ಧಿ ಇಣುಕು ಹಾಕಿತು... ಮುಂದಿನ ಎಲ್ಲ ಅವಾಂತರಗಳಿಗೆ ದಾರಿ ಮಾಡಿಕೊಟ್ಟಿತು. 'ಏನಪಾ, ನಿನ್ನ ಪುಸ್ತಕಕ್ಕೆ ಅಕಾಡೆಮಿಯವರು ಬಹುಮಾನ ಕೊಟ್ಟಾರಲ್ಲ...' ಎಂದು ಶಿವಪ್ಪ ಸಹಜ ಖುಷಿ ವ್ಯಕ್ತಪಡಿಸಲಿಲ್ಲ. ಆದರೆ ಕರಿಬಸಯ್ಯ ಪ್ರತಿಕ್ರಿಯಿಸಲಿಲ್ಲ. 'ಏನ್ ನೋಡಿ ಪ್ರಶಸ್ತಿ ಕೊಡ್ತಾರೋ... ನಮ್ಮ ಕಾಲದಾಗ ಮಾಸ್ತಿಯಂಥವರಿಗೆ ಪ್ರಶಸ್ತಿ ಕೊಡ್ತಿದ್ದರು...' ಎಂದು ಶಿವಪ್ಪ ಮತ್ತೆ ಕಿಚಾಯಿಸಿದರು. ಶಿವಪ್ಪನವರ ಮಾತು ಅಷ್ಟಕ್ಕೆ ನಿಂತಿದ್ದರೆ ಅವಾಂತರಕ್ಕೆ ಅಸ್ಪದ ಆಗ್ತಿರಲಿಲ್ಲ... ನೀಚಬುದ್ಧಿಯ ನಾಲಗೆ ಹರಿದಾಡತೊಡಗಿತು... 'ಆಯ್ತಪ್ಪ, ಇನ್ನು ಮುಂದಾದರೂ ಛಲೋ ಕತಿ ಬರಿ... ಪ್ರಶಸ್ತಿ ಬಂದ ಮೇಲಾದ್ರೂ ಮನಷ್ಯಾ ಶ್ಯಾಣ್ಯಾ ಆಗಬೇಕು' ಎಂದರು. ಶಿವಪ್ಪ ಮಾತು ಮುಗಿಸಿರಲಿಲ್ಲ...